**37 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು**

**ಪಿ.ಸಿ.ಆರ್. ನಂ. 10553/2023**

**ಪ್ರಾ.ಸಃ 1**

| | |
|---|---|
| **ಸಾಕ್ಷಿದಾರರ ಹೆಸರು** | ಉಷ |
| **ತಂದೆಯ/ಗಂಡನ ಹೆಸರು** | ಶ್ರೀನಿವಾಸ್ |
| **ವಯಸ್ಸು** | 60 ವರ್ಷ |
| **ಉದ್ಯೋಗ** | ವ್ಯಾಪಾರ |
| **ವಿಳಾಸ** | ಬಸವನಗುಡಿ, ಬೆಂಗಳೂರು. |
| **ಪ್ರ. ವ. ಬೋ ದಿನಾಂಕ** | 08/11/2023 |

**<u>ದಂಡ ಪ್ರಕ್ರಿಯೆ ಸಂಹಿತೆ ಕಲಂ 200 ರಡಿಯಲ್ಲಿ ಪಿರ್ಯಾದಿಯ ಸತ್ಯ ಪ್ರಮಾಣ ಹೇಳಿಕೆಃ</u>**

ನಾನು ಬಸವನಗುಡಿಯ ನ್ಯಾಷನಲ್ ಕಾಲೇಜ್ ಎದರುಗಡೆ ಕಳೆದ 30 ವರ್ಷದಿಂದ "Butter Sponge" ಎಂಬ ಹೆಸರಿನಡಿಯಲ್ಲಿ ಬೇಕರಿ ವ್ಯಾಪಾರ ಮಾಡುತ್ತಿದ್ದೇನೆ. ಕಳೆದ ಮೂರು ವರ್ಷದಿಂದ ಕೋವಿಡ್ ಕಾರಣ ನಾನು ಬೇಕರಿ ವ್ಯವಹಾರ ಮಾಡಿರುವುದಿಲ್ಲ. ನಾನು ಕಳೆದ ಡಿಸೆಂಬರ್ 2022 ರಿಂದ ಪುನಃ ಅದೇ ಹೆಸರಿನಡಿಯಲ್ಲಿ ಸೌತ್ ಎಂಡ್ ರಸ್ತೆಯಲ್ಲಿ ಬೇಕರಿ ವ್ಯಾಪಾರ ಮಾಡುತ್ತಿದ್ದೇನೆ. ಆರೋಪಿತಳು ನವೆಂಬರ್ 2022 ರಲ್ಲಿ ನನ್ನ ಬೇಕರಿ ಬಳಿ ಅದೇ ಬಟರ್ ಸ್ಪಾಂಜ್ ಹೆಸರಿನಲ್ಲಿ ಬೇಕರಿ ವ್ಯಾಪಾರ ಮಾಡುತ್ತಿದ್ದಾರೆ. ನಾನು ನಡೆಸುತ್ತಿರುವ ಬೇಕರಿ ಅದು ವಿವಿ ಪುರಂ ನಲ್ಲಿರುವ ವಿಬಿ ಬೇಕರಿಯ ಅಂಗ ಸಂಸ್ಥೆ ಆಗಿರುತ್ತದೆ. ನನ್ನ ಬೇಕರಿಗೆ ಬರುವ ಗ್ರಾಹಕರು ಅವರುಗಳು ಆರೋಪಿತಳು ನಡೆಸುತ್ತಿರುವ ಬಟರ್ ಸ್ಪಾಂಜ್ ಬೇಕರಿಗೆ ಹೋಗಿದ್ದು ಅವರಿಗೆ ಅದು ನನ್ನ ಬಟರ್ ಸ್ಪಾಂಜ್ ಬೇಕರಿ ಅಲ್ಲ ಎಂದು ತಿಳಿದು ಬಂತು ಎಂದು ನನಗೆ ತಿಳಿಸಿರುತ್ತಾರೆ. ಆರೋಪಿತಳು ಅದೇ ಬಟರ್ ಸ್ಪಾಂಜ್ ಹೆಸರಿನಲ್ಲಿ ಬೇಕರಿ ನಡೆಸುತ್ತಿರುವುದರಿಂದ ನಾನು ಮಾಡುತ್ತಿರುವ ವ್ಯಾಪಾರಕ್ಕೆ ಬಹಳ ನಷ್ಟವಾಗಿರುತ್ತದೆ.

**ಮುಂದುವರೆದ ಪ್ರಾಮಾಣಿಕೃತ ಹೇಳಿಕಗಾಗಿ ಮತ್ತು ದಾಖಲೆಗಳನ್ನು ಗುರುತಿಸುವ ಸಲುವಾಗಿ ಸಾಕ್ಷಿ ಸಮಯವಕಾಶವನ್ನು ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

**ಓ.ಹೇ. ಕೇ. ಸ. ಇ. ಒ**

**37 ನೇ ಅ.ಮು. ಮ. ದಂ. ನ್ಯಾ.**